ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ
ಕೆ ಆರ್ ನಗರ.

**<u>ಸಿಸಿ ನಂ. 127/2022</u>**

ಪಿರ್ಯಾದುದಾರರುಃ ಸರ್ಕಾರದ ಪರ ಕೆ ಆರ್ ನಗರ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರುಃ ಹರೀಶ ಬಿನ್ ಲೇಟ್ ವೆಂಕಟೇಶ,
32 ವರ್ಷ, ವಾಸಃ ನಂ. ಗುಳುವಿನ ಅತ್ತಿಗುಪ್ಪೆ ಗ್ರಾಮ,
ಹೊಸ ಅಗ್ರಹಾರ ಹೋಬಳಿ, ಕೆ ಆರ್ ನಗರ ತಾಲ್ಲೂಕು,
ಮೈಸೂರು ಜಿಲ್ಲೆ.

<u>ದೋಷಾರೋಪಣೆ</u>

ಶ್ರೀಮತಿ ಪವಿತ್ರ ಆರ್. ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯದಂಡಾಧಿಕಾರಿಗಳು, ಕೆ ಆರ್ ನಗರ ಆದ ನಾನು ಈ ಕೆಳಗಿನಂತೆ ಅಪರಾಧವನ್ನು ನೀವು ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ದಿನಾಂಕ **04.10.2021** ರಂದು ಕೆ ಆರ್ ನಗರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕೆ ಆರ್ ನಗರ ಟೌನ್ ಕೆ ಆರ್ ನಗರ ಟೌನ್ ನಲ್ಲಿ ಚಾಸಾ1-ಯಶೋಧಮ್ಮರವರು ಆಸ್ಪತ್ರೆಯ ಕಡೆಗೆ ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿಯಾದ ನೀವು ಕರೋನ ಬಂದಿರುವವರಿಗೆ ಸರ್ಕಾರದಿಂದ ರೂ.40,000/- ಹಣ ಬರುತ್ತದೆ ನನಗೆ ರೂ.4,000/- ಕೊಟ್ಟರೆ ದುಡ್ಡು ಬರುವಂತೆ ಮಾಡಿಸಿಕೊಡುತ್ತೇನೆ ಎಂದು ಹೇಳಿ ಚಾಸಾ1 ರವರನ್ನು ನಂಬಿಸಿ ಕೆ ಆರ್ ನಗರದಿಂದ ಚುಂಚನಕಟ್ಟೆ ಕರ್ನಾಟಕ ಗ್ರಾಮೀಣ ಬ್ಯಾಂಕ್‌ಗೆ ಕರೆದುಕೊಂಡು ಹೋಗಿ ಚಾಸಾ1 ರವರ ಬ್ಯಾಂಕ್ ಅಕೌಂಟ್ ಸಂಖ್ಯೆಃ12364100000565 ನಿಂದ ರೂ.7,000/- ಹಣವನ್ನು ಡ್ರಾ ಮಾಡಿಸಿಕೊಂಡು ಚಾಸಾ1 ರವರಿಗೆ ಸರ್ಕಾರದಿಂದ ಬರುವ ಹಣವನ್ನು ಕೊಡಿಸಿಕೊಡುವುದಾಗಿ ನಂಬಿಸಿ ಮೋಸ ಮಾಡಿ ರೂ.7,000/-ಗಳನ್ನು ತೆಗೆದುಕೊಂಡು ಪೋಸ್ಟ್ ಆಫೀಸಿನಲ್ಲಿ ಕಟ್ಟಿ ಬರುವುದಾಗಿ ಹೇಳಿ ವಾಪಸ್ಸು ಬರದೇ ಚಾಸಾ1 ರವರನ್ನು ನಂಬಿಸಿ ಮೋಸ

ಮಾಡಿರುತ್ತೀರಿ. ಆ ಪ್ರಕಾರ ಭಾರತೀಯ ದಂಡ ಸಂಹಿತೆ ಕಲಂ 420 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಆದ್ದರಿಂದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಯನ್ನು ಎದುರಿಸಬೇಕೆಂದು ನಿರ್ದೇಶಿಸುತ್ತೇನೆ.

ದಿಃ 07.10.2022

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ಗಳು, ಕೆ ಆರ್ ನಗರ.